**ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ, ಮೇಯೋಹಾಲ್ ವಿಭಾಗ, ಬೆಂಗಳೂರು.**
**ದಿಃ 16.07.2024 ರಂದು ಸಾಕ್ಷಿದಾರರಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ:**

ನಾನು ದಿನಾಂಕಃ 16.07.2024 ರಂದು ನಮ್ಮ ವಕೀಲರ ಮೂಲಕ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಈ ಕೆಳಗೆ ನಮೂದಿಸಿರುವ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

| | | |
|---|---|---|
| 1 | ವಿಮೆ, ಅದರ ಷರತ್ತಿನ ವಿವರಗಳ ನಕಲು | ನಿಡಿ.1 |
| 2 | ವಾಹನ ನೋಂದಣಿ ಸಂಖ್ಯೆ ಕೆಎ-50-ಎ-4939 ವಾಹನದ ಬಿ-ಎಕ್ಸ್ ಟ್ರ್ಯಾಕ್ಟ್ | ನಿಡಿ.2 |
| 3 | ಕಲಂ 133 ರ ಅಡಿಯಲ್ಲಿ ನೀಡಿದ ನೋಟೀಸ್ ಹಾಗೂ ಉತ್ತರ | ನಿಡಿ.3, 4 |

ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಅರ್ಜಿದಾರರ ಪರ ವಕೀಲರಿಂದ**

ನಮ್ಮ ಕಂಪನಿಯ ವತಿಯಿಂದ ಅಪಘಾತದ ಸಂಬಂಧ ಪ್ರತ್ಯೇಕ ತನಿಖೆ ಮಾಡಿಲ್ಲ. ಪೋಲೀಸರು ಸಲ್ಲಿಸಿರುವ ದಾಖಲೆಗಳ ಬಗ್ಗೆ ಮಾಹಿತಿ ಇದೆ. ಅಪಘಾತದ ದಿನವೇ ದೂರು ದಾಖಲಾಗಿದೆ ಎಂದರೆ ಸರಿ. ದೂರಿನಲ್ಲಿ ವಾಹನ ನೋಂದಣಿ ಸಂಖ್ಯೆಃ ಟಿಎನ್-29-ಬಿಟಿ-6886 ವಾಹನದ ಬಗ್ಗೆ ನಮೂದಿಸಿಲ್ಲ ಎಂದರೆ ಸಾಕ್ಷಿ ಉದ್ದೇಶ ಪೂರ್ವಕವಾಗಿ ನಮೂದಿಸಿಲ್ಲ, ಅಂತಿಮ ವರದಿಯಲ್ಲಿ ಸದರಿ ವಾಹನದ ವಿವರಣೆ ಇದೆ ಎನ್ನುತ್ತಾರೆ. ನಿ.ಪಿ.7 ರಲ್ಲಿ ಸದರಿ ವಾಹನದ ಜಖಂ ನ ಬಗ್ಗೆ ವಿವರ ಇಲ್ಲ ಎಂದರೆ ಸರಿ. ಸದರಿ ವಾಹನಕ್ಕೂ, ಅಪಘಾತಕ್ಕೂ ಸಂಬಂಧ ಇಲ್ಲ ಎಂದರೆ ಸಾಕ್ಷಿ, ನಾವು ವಿಮೆ ನೀಡಿರುವ ವಾಹನ ಅಪಘಾತಪಡಿಸಿಲ್ಲ ಎನ್ನುತ್ತಾರೆ. ನಿಪಿ.11 ರಂತೆ ನೀವು ವಿಮೆ ನೀಡಿರುವ ವಾಹನದ ಚಾಲಕರ ವಿರುದ್ಧ ಐ.ಪಿ.ಸಿ. ಕಲ 279, 304ಎ ದಾಖಲಾಗಿದೆ ಎಂದರೆ ಸಾಕ್ಷಿ ಎರಡೂ ವಾಹನದ ಚಾಲಕರ ವಿರುದ್ಧ

ಅಂತಿಮ ವರದಿ ಸಲ್ಲಿಸಿದ್ದಾರೆ ಎನ್ನುತ್ತಾರೆ. ನಿಮ್ಮ ನಿಪಿ.11 ರಂತೆ ನೀವು ವಿಮೆ ನೀಡಿರುವ ವಾಹನ ಚಾಲಕರ ಅಜಾಗರೂಕತೆಯಿಂದ ಅಪಘಾತ ಆಗಿ ವ್ಯಕ್ತಿ ಮೃತಪಟ್ಟಿದ್ದಾರೆ ಎಂರೆ ಸರಿಯಲ್ಲ. ಸದರಿ ವಾಹನದ ಚಾಲಕರ ಅಜಾಗರೂಕತೆಯಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಚಾಲಕರಿಗೆ ಎಲ್.ಎಂ.ವಿ. ಪರವಾನಗಿ ಮಾತ್ರ ಇದ್ದು, ಅವರಿಗೆ ಟ್ರಾನ್ಸ್ ಪೋರ್ಟ್‌ವಾಹನ ಚಲಾಯಿಸುವ ಪರವಾನಗಿ ಇರಲಿಲ್ಲ. ಖಾಲಿ ವಾಹನದ ತೂಕ 7,500 ಕೆ.ಜಿ. ಗಿಂತ ಕಡಿಮೆ ಇದ್ದಲ್ಲಿ ಅದು ಎಲ್.ಎಂ.ವಿ. ವಾಹನ ಎಂದು ಪರಿಗಣಿಸಲಾಗುತ್ತದೆ ಎಂದರೆ ಸರಿಯಲ್ಲ. ನಿ.ಡಿ.2 ರಪ್ರಕಾರ ಆ ಖಾಲಿ ವಾಹನದ ತೂಕ 5,500 ಗಿಂತ ಕೆ.ಜಿ. ಗಿಂತ ಕಡಿಮೆ ತೂಕ ಇತ್ತು ಎಂದರೆ ಸರಿ. ಎಲ್.ಎಂ.ವಿ. ಪರವಾನಗಿ ಹೊಂದಿದ ವ್ಯಕ್ತಿ ಖಾಲಿ ವಾಹನದ ತೂಕ 7,500 ಕೆ.ಜಿ. ಇರುವ ವಾಹನವನ್ನು ಚಲಾಯಿಸಬಹುದು ಎಂದರೆ ಸರಿಯಲ್ಲ. ವಾಹನ ಚಾಲಕರಿಗೆ ಪರವಾನಗಿ ಇದ್ದರೂ ಸಹ ಪರಿಹಾರ ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ. ಹೇ.ಕೇ. ಸರಿ ಇದೆ.

ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ,
ಮೇಯೋಹಾಲ್ ವಿಭಾಗ, ಬೆಂಗಳೂರು.